

ನೀರಿಳಿದು ಚಕ್ಕೆಗಳೆದ್ದು ಬರುತ್ತಿದ್ದವು. ಮನೆಯ ಒಳಗೆ ಸಣ್ಣ ಹಾಲ್; ಅಲ್ಲಿ ಟೀವಿ, ಫ್ರಿಡ್ಜ್, ಸಣ್ಣದೊಂದು ಮಂಚ, ಒಂದೆರಡು ಪ್ಲಾಸ್ಟಿಕ್ ಚೇರುಗಳು, ರೂಮಿನೊಳಗೊಂದು ಮಂಚ, ದಪ್ಪದಾದ ಬೀರು ಇದ್ದವು. ಬಚ್ಚಲಿನಲ್ಲಿ ವಾಷಿಂಗ್ ಮಶೀನು, ಬಾಯ್ಲರ್, ನೀಲಿ ಡ್ರಮ್, ಗ್ಯಾಸ್ ಸ್ಟೌ, ಸಿಲಿಂಡರ್, ದೊಡ್ಡ ದೊಡ್ಡ ನೀರು ತುಂಬಿದ ಕೊಳಗಗಳು, ಸ್ಟೀಲ್ ಬಿಂದಿಗೆಗಳು, ಹೀಗೆ ಮನೆಯಲ್ಲಿ ಸಣ್ಣ ಖಾಲಿ ಜಾಗ ಇದ್ದಲ್ಲಿ ಸಾಮಾನುಗಳನ್ನು ತುಂಬಲಾಗಿತ್ತು. ಜೊತೆಗೆ, ಎಲ್ಲಿ ನೋಡಿದರಲ್ಲಿ ಹೂವು, ಒದ್ದೆ ಪಂಚೆಯಲ್ಲಿ ಮಂಚದ ಕೆಳಗಡೆ ಹರವಿದ್ದು ಸೇವಂತಿಗೆ, ಫ್ರಿಡ್ಜಿನ ಒಳಗಡೆ ಗಂಟು ಕಟ್ಟಿದ್ದ ಮಲ್ಲಿಗೆ, ಕನಕಾಂಬರ, ಅಡುಗೆಮನೆಯ ಕಟ್ಟೆಯ ಮೇಲೆ ಪ್ಲಾಸ್ಟಿಕ್ ಬ್ಯಾಗಿನಲ್ಲಿ ಹಾಕಿಟ್ಟ ರೋಜಾಗಳಿಂದಾಗಿ ಮನೆಯಲ್ಲಿ ಹಲವಾರು ಹೂವುಗಳ ಮಿಶ್ರವಾಸನೆ. ಈ ಹೂವು, ಸಾಮಾನುಗಳು, ಮುಟ್ಟಿದರೆ ಉದುರುವ ಗೋಡೆಗಳ ದಿವ್ಯ ಸಾನಿಧ್ಯದಲ್ಲಿ ಚಂಪಾಳ ಜೊತೆಗೆ ಅವಳಪ್ಪ, ಅಮ್ಮ, ಅಜ್ಜಿ ಹಾಗೂ ತಮ್ಮ ಸೇರಿ ಐದು ಜನರಿದ್ದರು.

ಮನೆಯವರೆಲ್ಲರೂ ಹೂವಿನ ವ್ಯಾಪಾರದಲ್ಲಿ ತೊಡಗಿಸಿಕೊಂಡವರೇ. ತಮ್ಮನಿಗೆ ಮಾತ್ರ ಶಾಲೆಯ ಯೋಗ ಇದ್ದಿದ್ದರಿಂದ ಅವನಿಗೆ ಹೂವಿನ ಕೆಲಸದಿಂದ ರಿಯಾಯಿತಿ ಕೊಡಲಾಗಿತ್ತು. ಚಂಪಾಳಿಗೆ ಎಂಟನೇ ಕ್ಲಾಸ್ ತನಕ ಶಾಲೆಯಾಗಿತ್ತು. ಅದಾದ ಮೇಲೆ ಅವಳಪ್ಪ ದೇವಾ ಅವಳನ್ನ ಶಾಲೆಯಿಂದ ಬಿಡಿಸಿ ಮನೆ ಕೆಲಸ, ಹೂವಿನ ವ್ಯಾಪಾರಕ್ಕೆ